ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 2 ರಿಂದ 5 ರವರೆಗೆ ಎರಡೂ ವಿಧೇಯಕಕ್ಕೆ ಸೇರಿಸಲಾಯಿತು)

ಖಂಡ 1 ಇತ್ಯಾದಿ

ಅಧ್ಯಕ್ಷರು :- ಪ್ರಸ್ತಾವ ಏನೆಂದರೆ; ''ಮೊದಲನೆ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

''ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)

ಪ್ರಸ್ತಾವ ಅಂಗೀಕಾರ

ಶ್ರೀ ಸಿದ್ಧರಾಮಯ್ಯ (ಉಪ ಮುಖ್ಯಮಂತ್ರಿಗಳು) :- ಮಾನ್ಯ ಅಧ್ಯಕ್ಷರೆ, 1998ರ ಕರ್ನಾಟಕ ಸ್ಟಾಂಪು (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು :- ಪ್ರಸ್ತಾವ ಏನೆಂದರೆ, ''1998ರ ಕರ್ನಾಟಕ ಸ್ಟಾಂಪು (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು

(ಉ) ಕರ್ನಾಟಕ ಮೋಟಾರು ತೆರಿಗೆ (ತಿದ್ದುಪಡಿ) ವಿಧೇಯಕ, 1998

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಸಿದ್ಧರಾಮಯ್ಯ (ಉಪ ಮುಖ್ಯಮಂತ್ರಿಗಳು) (ಸಾರಿಗೆ ಮಂತ್ರಿಗಳ ಪರವಾಗಿ) :- ಮಾನ್ಯ ಅಧ್ಯಕ್ಷರೆ, 1998ರ ಕರ್ನಾಟಕ ಮೋಟಾರು ವಾಹನಗಳ ತೆರಿಗೆ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು

ಅಧ್ಯಕ್ಷರು :- ಪ್ರಸ್ತಾವ ಏನೆಂದರೆ, ''1998ರ ಕರ್ನಾಟಕ ಮೋಟಾರು ವಾಹನಗಳ ತೆರಿಗೆ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು''.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು ಖಂಡ 2 ರಿಂದ 5 ರವರೆಗೆ

ಅಧ್ಯಕ್ಷರು :- '' ಖಂಡ 2 ರಿಂದ 5 ರವರೆಗೆ ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ''.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 2 ರಿಂದ 5 ರವರೆಗೆ ಎರಡೂ ಸೇರಿದಂತೆ ವಿಧೇಯಕಕ್ಕೆ ಸೇರಿಸಲಾಯಿತು)

ಖಂಡ 1 ಇತ್ಯಾದಿ

ಅಧ್ಯಕ್ಷರು :- ಪ್ರಸ್ತಾವ ಏನೆಂದರೆ; ''ಮೊದಲನೆ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಮೊದಲನೆ ಖಂಡ ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)

ಪ್ರಸ್ತಾವ ಅಂಗೀಕಾರ

ಶ್ರೀ ಸಿದ್ದರಾಮಯ್ಯ (ಉಪ ಮುಖ್ಯಮಂತ್ರಿಗಳು) :- ಮಾನ್ಯ ಅಧ್ಯಕ್ಷರೆ, 1998ರ ಕರ್ನಾಟಕ ಮೋಟಾರು ವಾಹನಗಳ ತೆರಿಗೆ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು :- ಪ್ರಸ್ತಾವ ಏನೆಂದರೆ; '' 1998ರ ಕರ್ನಾಟಕ ಮೋಟಾರು ವಾಹನಗಳ ತೆರಿಗೆ (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ವಿರೋಧ ಪಕ್ಷದ ನಾಯಕರು) :- ಅಧ್ಯಕ್ಷರೆ, ಕರ್ನಾಟಕ ಬಾಡಿಗೆ ನಿಯಂತ್ರಣ (ತಿದ್ದುಪಡಿ) ವಿಧೇಯಕ, 1998 ಹಾಗೂ ಇತರೆ ವಿಧೇಯಕಗಳನ್ನು ನಾಳೆ ತೆಗೆದುಕೊಳ್ಳೋಣ.

ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):- ಬಾಡಿಗೆ ನಿಯಂತ್ರ (ವಿಧೇಯಕ) 1998 ಸಣ್ಣ ರಿಪ್ಲೇಸ್‌ಮೆಂಟ್ ಆಫ್ ಅರ್ಡಿನೆನ್ಸ್ ಅಷ್ಟೆ ಅದನ್ನು ಈಗಲೇ ತೆಗೆದುಕೊಳ್ಳಬಹುದು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :- ಅವು ಟ್ಯಾಕ್ಸೇಷನ್ ಅಲ್ಲ, ಆಯವ್ಯಯಕ್ಕೆ ಸಂಬಂಧಪಟ್ಟದ್ದಲ್ಲ, ನಾವು ಓದಿ ಒಂದು ವಾಖ್ಯವಾದರೂ ನಾಳೆ ಹೇಳುವುದಕ್ಕೆ ಅವಕಾಶ ಕೊಡಿ. ಅದರಲ್ಲಿ ಏನಿದೆ ಏನು ಇಲ್ಲವೆನ್ನುವುದನ್ನು ನಾಳೆ ನೋಡೋಣ. ನಾವು ಬೆಳಿಗ್ಗೆ 9ಗಂಟೆಗೆ ಬಂದರೆ ಈಗ ಹೋಗಬೇಕಾಗಿದೆ.

ಅಧ್ಯಕ್ಷರು :- ಅವನ್ನು ನಾಳೆ ತೆಗೆದುಕೊಳ್ಳೋಣ ಬಿಡಿ, ಈಶ್ವರಪ್ಪನವರೆ, ಈಗ ಮೈಸೂರು ಪೇಪರ್ ಮಿಲ್ಸ್ ಅಧಿಕಾರಿಗಳೆಲ್ಲಾ ಪೇಪರ್ಸ್ ಎಲ್ಲಾ ತೆಗೆದುಕೊಂಡು ಬಂದು ಬೆಳಿಗ್ಗೆಯಿಂದ ಕಾಯುತ್ತಿದ್ದರು, ನಮಗೂ ಇವತ್ತು ಕಾಲಾವಕಾಶವಾಗಲಿಲ್ಲ, ಅದಕ್ಕೆ ಅವರಿಗೆ ನಾಳೆ ಬರಲು ಹೇಳಿದ್ದೇನೆ. ಏಕೆಂದರೆ, ಅವರು ಬಂದಿರಲಿಲ್ಲವೆನ್ನುವ ಅಭಿಪ್ರಾಯ ತಮಗೆ ಬರಬಾರದು, ಅವರು ಬೆಳಗ್ಗೆಯಿಂದ ಇಲ್ಲೇ ಇದ್ದರು, ಆ ಡಾಕ್ಯುಮೆಂಟ್ಸ್ ಎಲ್ಲಾ ತೆಗೆದು ಕೊಂಡು ಬಂದಿದ್ದಾರೆ, ಕಾನೂನು ಮಂತ್ರಿಗಳು ಕೂಡ